UASB LIBRARY
Newspaper Clippings
Pg .1 Monday 13-09-2021 Jai Kisan



ರೈತರೊಂದಿಗೆ ಒಂದು ದಿನ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಕೃಷಿ ಸಚಿವ ಬಿ.ಸಿ.ಪಾಟೀಲ್

ಕೃಷಿಯಲ್ಲಿ ಆಧುನಿಕ ತಂತ್ರಜ್ಞಾನ ಬಳಸಲು ಸಲಹೆ

ನ್ಯೂ ವಿಶ್ವವಾಣಿ ಸುದ್ದಿಮನೆ ಚಿತ್ರದುರ್ಗ

ಸಾಂಪ್ರದಾಯಿಕ ಕೃಷಿ ಪದ್ಧತಿಯಿಂದ ರೈತ ಸಮುದಾಯ ಹೊರಬಂದು, ಆಧುನಿಕ ತಂತ್ರಜ್ಞಾನ ಬಳಸಿ ಸಮಗ್ರ ಕೃಷಿ ಕೈಗೊಂಡು ಕೃಷಿ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಬೇಕು ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಹೇಳಿದರು.

ಹಿರಿಯೂರು ತಾಲೂಕಿನ ಐಮಂಗಲ ಗ್ರಾಮದ ರೈತ ಲಕ್ಷ್ಮಣ ರೆಡ್ಡಿ ಅವರ ಜಮೀನಿನಲ್ಲಿ ರೈತರೊಂದಿಗೊಂದು ದಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ರೈತರು ಸಾಲದಿಂದ ಮುಕ್ತರಾಗಬೇಕು ಎಂಬುದು ರೈತರೊಂದಿಗೆ ಒಂದು ದಿನ ಕಾರ್ಯಕ್ರಮದ ಉದ್ದೇಶವಾಗಿದೆ. ರೈತರ ಜೀವನ ಮಾನ್ಸೂನ್ ಜತೆ ಜೂಜಾಟ ಆಡುವುದಾಗಿದೆ. ಕೃಷಿಕರು ಸಮಗ್ರ ಕೃಷಿ ಪದ್ಧತಿ, ಕೃಷಿಯಲ್ಲಿ ಆಧುನಿಕತೆ ಅಳವಡಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ರೈತರಲ್ಲಿ ಆತ್ಮಸ್ಥೈರ್ಯ ತುಂಬುವ ನಿಟ್ಟಿನಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.


ಹಿರಿಯೂರು ತಾಲೂಕಿನ ಐಮಂಗಲ ಗ್ರಾಮದ ರೈತ ಲಕ್ಷ್ಮಣ ರೆಡ್ಡಿ ಅವರ ಜಮೀನಿ ನಲ್ಲಿ ರೈತರೊಂದಿಗೊಂದು ದಿನ ಕಾರ್ಯಕ್ರಮವನ್ನು ಸಚಿವ ಬಿ.ಸಿ.ಪಾಟೀಲ ಉದ್ಘಾಟಿಸಿದರು.

ರೈತರು ಕೃಷಿ ಜತೆಗೆ, ಹೈನುಗಾರಿಕೆ, ಕೋಳಿ, ಕುರಿ ಸಾಕಾಣಿಕೆ, ಜೇನು ಸಾಕಾಣಿಕೆ ಸೇರಿದಂತೆ ಈ ರೀತಿಯ ಉಪ ಕಸುಬುಗಳಿಂದ ರೈತರು ತಮ್ಮ ಆದಾಯ ದ್ವಿಗುಣಗೊಳಿಸಿ ಕೊಳ್ಳಬಹುದು. ಕೃಷಿಯಲ್ಲಿ ಆಧುನಿಕತೆ, ಹೊಸ ಹೊಸ ತಂತ್ರಜ್ಞಾನದ ಉಪಕರಣಗಳನ್ನು ರೈತರು ಬಳಕೆ ಮಾಡಿಕೊಳ್ಳಬೇಕು. ಕೃಷಿ ಇಲಾಖೆ ರೈತರಿಗೆ ವೈದ್ಯರಿದ್ದಂತೆ. ರೈತರು ಬೆಳೆ ಬೆಳೆಯುವ ಮುನ್ನ ಕೃಷಿ ಅಧಿಕಾರಿಗಳನ್ನು ಸಂಪರ್ಕ ಮಾಡಿ ಅಧಿಕಾರಿಗಳ ಸಲಹೆ ಪಾಲಿಸಿ ಬೆಳೆ ಬೆಳೆಯಬೇಕು ಎಂದು ಸಲಹೆ ನೀಡಿದರು.

ಹಿರಿಯೂರು ಶಾಸಕ ಪೂರ್ಣಿಮಾ ಕೆ. ಶ್ರೀನಿವಾಸ್ ಮಾತನಾಡಿ, ನಿಜವಾಗಿಯೂ ರೈತನ ಬದುಕು ಕಷ್ಟ. ರೈತ ನಿರಂತರವಾಗಿ ದುಡಿಯುತ್ತಾನೆ. ಇಂತಹ ಅನ್ನದಾತನ ಕಾಪಾಡುವುದು ಪ್ರಮುಖ ವಿಷಯವಾಗಿದೆ. ರೈತರ ಹಿತಕ್ಕೆ ಸರಕಾರ ಬದ್ಧವಾಗಿದೆ ಎಂದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ಶ್ರೀನಿವಾಸ್ ಮಾತನಾಡಿದರು. ಕೃಷಿ ಸಚಿವ ಬಿ.ಸಿ. ಪಾಟೀಲ್ ಹಾಗೂ ಹಿರಿಯೂರು ಶಾಸಕಿ ಪೂರ್ಣಿಮಾ, ತಾಲೂಕಿನ ಐಮಂಗಲ ಗ್ರಾಮದ ರೈತ ಲಕ್ಷ್ಮಣ ರೆಡ್ಡಿ ಅವರ ಸಮಗ್ರ ಕೃಷಿ ಪದ್ಧತಿ ತಾಕಿಗೆ ಭೇಟಿ ನೀಡಿ ವೀಕ್ಷಿಸಿದರು. ಸಮಗ್ರ ಕೃಷಿ ಪದ್ಧತಿಯ ಅಜೊಲ್ಲಾ ತೊಟ್ಟಿ, ಎರೆಹುಳು ಸಾಕಾಣಿಕೆ, ಮೆಕ್ಕೆಜೋಳ ರಸಮೇವು ತಯಾರಿಕೆ ಪ್ರಾತ್ಯಕ್ಷಿಕೆ, ರಾಶಿ ಪೂಜೆ, ಸಾವಯವ ಸಂತೆ ಹಾಗೂ ಸಾವಯವ ಕೃಷಿಕರೊಂದಿಗೆ ಸಂವಾದ ನಡೆಸಿದರು.

ಜಾನುವಾರುಗಳ ಪ್ರದರ್ಶನ: ಹಳ್ಳಿಕಾರ್, ಅಮೃತ್ ಮಹಲ್ ತಳಿಗಳು ಸೇರಿದಂತೆ ವಿವಿಧ ತಳಿಗಳ ರಾಸು ಪ್ರದರ್ಶನ ಏರ್ಪಡಿಸಲಾಗಿತ್ತು. ಮಲೆನಾಡು ಗಿಡ್ಡತಳಿ, ಗೀರ್ ತಳಿ, ಅಮೃತ್ ಮಹಲ್ ತಳಿ, ಬನ್ನೂರು ಕುರಿ, ನಾರಿ ಸುವರ್ಣ, ಕೋಳಿಗಳಲ್ಲಿ ಅಸೀಲ್ ನಾಟಿ, ಟರ್ಕೀಸ್, ಗೀಸ್ ತಳಿ ಪ್ರದರ್ಶನ ಏರ್ಪಡಿಸಲಾಗಿತ್ತು.

13-09-2021
Vsv Pg 10

ವಿಜಯವಾಣಿ ರೈತ ಮಿತ್ರ

■ ಟೊಮ್ಯಾಟೊ ಬೆಳೆಯಲ್ಲಿ ಲಘು ಪೋಷಕಾಂಶಗಳ ಮಹತ್ವ, ಕೊರತೆಯ ಲಕ್ಷಣ ಹಾಗೂ ನಿವಾರೋಣಾಪಾಯ ವಿಧಾನಗಳನ್ನು ತಿಳಿಸಿ?

| ಪಾಪಿರೆಡ್ಡಿ ಹೋಳೂರು, ಕೋಲಾರ

ಟೊಮ್ಯಾಟೊ ಬೆಳೆಗೆ ಸತು, ಬೋರಾನ್, ಕಬ್ಬಿಣ, ಕ್ಯಾಲ್ಸಿಯಂ, ಮ್ಯಾಂಗನೀಸ್, ಮಾಲಿಬ್ದಿನಂ ಇತ್ಯಾದಿ ಲಘು ಪೋಷಕಾಂಶಗಳು ಅತ್ಯವಶ್ಯಕ. ಈ ಲಘು ಪೋಷಕಾಂಶಗಳ ಕೊರತೆಯಿಂದ ಎಲೆಗಳ ಮೇಲೆ ಹಳದಿ ಮಚ್ಚೆಗಳು, ಎಲೆಗಳು ಕೆಂಪು ಬಣ್ಣಕ್ಕೆ ತಿರುಗುವುದು, ಹೂಗಳು ಉದುರುವುದು, ಹಣ್ಣುಗಳ ಬಣ್ಣದಲ್ಲಿ ಏರುಪೇರಾಗುವುದು, ಬ್ಲಾಸಂ ಆ್ಯಂಡ್ ರಾಟ್ ಹೀಗೆ ಇನ್ನು ಅನೇಕ ತೊಂದರೆ ಕಂಡು ಬರುತ್ತವೆ. ಇವುಗಳ ನಿವಾರಣೆಗೆ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯವರು ಅಭಿವೃದ್ಧಿ ಪಡಿಸಿರುವ ತರಕಾರಿ ಸ್ಪೆಷಲ್ ಲಘು ಪೋಷಕಾಂಶಗಳ ಮಿಶ್ರಣವನ್ನು 3 ಬಾರಿ ಸಿಂಪರಣೆ ಮಾಡಬೇಕು. ಇದನ್ನು ಪ್ರತಿ 1.0 ಲೀಟರ್ ನೀರಿಗೆ 5.0 ಗ್ರಾಂ ಅಂದರೆ 200 ಲೀಟರ್ ನೀರಿಗೆ 1.0 ಕಿ.ಗ್ರಾಂ. ಸೇರಿಸಿ ಅದಕ್ಕೆ 4-5 ನಿಂಬೆ ಹಣ್ಣಿನ ರಸ ಮತ್ತು 3-4 ಪ್ಯಾಕೆಟ್ ಶಾಂಪೂ ಸೇರಿಸಿ, ಚೆನ್ನಾಗಿ ಬೆರೆಸಿ ನಾಟಿ ಮಾಡಿದ 30, 45 ಮತ್ತು 60 ದಿನಗಳ ನಂತರ ಸಿಂಪರಣೆ ಮಾಡಬೇಕು. ಇದು ಲಘು ಪೋಷಕಾಂಶಗಳ ಕೊರತೆ ನಿವಾರಿಸುವುದಲ್ಲದೆ ಹಣ್ಣುಗಳ ಗುಣಮಟ್ಟ ಸಹ ಹೆಚ್ಚಿಸುತ್ತದೆ.

| ಡಾ. ಶಾಲಿನಿ ಎಂ.
ತೋಟಗಾರಿಕೆ ತಜ್ಞರು

■ ಚಳಿಗಾಲಕ್ಕೆ/ಹಿಂಗಾರಿಗೆ ಸೂಕ್ತವಾದ ರಾಗಿ ತಳಿಗಳ ಬಗ್ಗೆ ಮಾಹಿತಿ ನೀಡಿ?

| ಪರಮೇಶ್ ಶೆಟ್ಟಹಳ್ಳಿ, ಚನ್ನಪಟ್ಟಣ

ತಳಿ	ಬಿತ್ತನೆ ಕಾಲ	ಅವಧಿ (ದಿನಗಳು)	ಇಳುವರಿ (ಕ್ವಿಂಟಾಲ್ ಪ್ರತಿ ಎಕರೆಗೆ)	
			ನೀರಾವರಿ	ಖುಷ್ಕಿ
ಕೆಎಂಆರ್ 301	ಸೆಪ್ಟೆಂಬರ್ ಅಕ್ಟೋಬರ್	115-120	12/14/21	8-10
ಇಂಡಾಫ್ 7				
ಇಂಡಾಫ್ 9		95-105		

| ಹರ್ಷಕುಮಾರ್ ಎಸ್.ಎಸ್. ಬೇಸಾಯ ತಜ್ಞರು

ರೈತರ ಸಮಸ್ಯೆಗಳಿಗೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ತಜ್ಞರು ವಿಸ್ತರಣಾ ನಿರ್ದೇಶನಾಲಯದ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ ವತಿಯಿಂದ ಪ್ರತಿ ಸೋಮವಾರ ಉತ್ತರಿಸಲಿದ್ದಾರೆ. ನಿಮ್ಮ ಪ್ರಶ್ನೆಗಳನ್ನು 9482477812/ 9567887043 ಸಂಖ್ಯೆಗೆ ವಾಟ್ಸ್‌ಆ್ಯಪ್ ಮಾಡಿ.

13-09-2021 Vv Pg 11



■ ಮುಸುಕಿನಜೋಳದಲ್ಲಿ ಬೂಜು/ಕೇದಿಗೆ ರೋಗದ ನಿಯಂತ್ರಣ ಹೇಗೆ?

| ಕಲ್ಲಪ್ಪ ಜನ್ನಪಟ್ಟಣ, ಹೊಳಲ್ಕೆರೆ

ಅ. ರೋಗ ನಿರೋಧಕ ತಳಿಗಳಾದ ಎನ್.ಎ.ಸಿ-6002, 6004 ಅಥವಾ ಎಂ.ಎ.ಎಚ್.14-5, ಹೇಮ ಮತ್ತು ನಿತ್ಯಶ್ರೀ ಹೈಬ್ರಿಡ್ ಗಳನ್ನು ಬಳಸಿ.

ಆ. ಬೆಳೆ ಪರಿವರ್ತನೆ (ಜೋಳ, ನವಣೆ, ಸಜ್ಜೆ ಹೊರತುಪಡಿಸಿ) ಮಾಡುವುದರಿಂದ ರೋಗದ ತೀವ್ರತೆ ಕಡಿಮೆ ಮಾಡಬಹುದು.

ಇ. ಬಿತ್ತನೆ ಬೀಜವನ್ನು 20 ನಿಮಿಷ ನೀರಿನಲ್ಲಿ ನೆನೆಸಿ, ನಂತರ ನೀರನ್ನು ಬಸಿದು ಪ್ರತಿ ಕಿಲೋ ಗ್ರಾಂ ಬಿತ್ತನೆ ಬೀಜಕ್ಕೆ 3 ಗ್ರಾಂ ರಿಡೋಮಿಲ್ -ಎಂ. ಝಡ್ 72 / ಏಪ್ರಾನ್‌ನಿಂದ ಬೀಜೋಪಚಾರ ಮಾಡುವುದು.

ಈ. ಮೆಟಲಾಕ್ಸಿಲ್ 8 + ಮ್ಯಾಂಕೋಜೆಬ್ 64 ಮಿಶ್ರಣ 72 ಡಬ್ಲ್ಯು.ಪಿ. 3 ಗ್ರಾಂ ಪ್ರತಿ ಲೀಟರ್ ನೀರಿಗೆ ಸೇರಿಸಿ ಸಿಂಪಡಿಸುವುದು.

| ಡಾ. ವೈ.ಎಂ.ಸೋಮಶೇಖರ್
ಸಸ್ಯರೋಗ ತಜ್ಞರು

For more information visit
University Library Website
Web - uasbagrilibindia.org
E-mail- librarian@uasbangalore.edu.in

ಅಡಕೆಗೆ ಮತ್ತೆ ಬಂಗಾರದ ಬೆಲೆ ಬಂದಿದೆ. ಕೆಂಪಡಿಕೆ ಕೆಜಿಯೊಂದಕ್ಕೆ 600 ರೂ.ಗಳ ಗಡಿದಾಟುತ್ತಿದೆ. ಇದ್ದಕ್ಕಿದ್ದ ಹಾಗೆ ಹೀಗೆ ಅಡಕೆಯ ಬೆಲೆ ಏಕೆ ಏರಿಕೆಯಾಗುತ್ತಿದೆ, ಅಂತಾರಾಷ್ಟ್ರೀಯ ವ್ಯಾಪಾರ ವಹಿವಾಟು, ಸ್ಮಗ್ಲಿಂಗ್ ನಿಯಂತ್ರಣ ಇತ್ಯಾದಿಗಳ ಪಾತ್ರ ಇದರಲ್ಲಿ ಎಷ್ಟಿದೆ?



ಅಡಕೆಗೆ ಮತ್ತೆ ಮಾನ

ದೇಶೀಯ ಅಡಕೆಗೆ ಹೆಚ್ಚಿದ ಬೇಡಿಕೆ



■ ರಾಮಸ್ವಾಮಿ ಹುಲಕೋಡು
ramaswamy.chandrashekar@timesgroup.com

'ಅಡಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು' ಎಂಬ ಗಾದೆ ಮಾತೊಂದಿದೆ. ಇಲ್ಲಿ ಅಡಕೆಯನ್ನು ಕನಿಷ್ಠ ಎಂಬ ಅರ್ಥದಲ್ಲಿ ಬಳಸಲಾಗಿದೆ. ಆದರೆ ಅಡಕೆಯ 'ಮಾನ' ಈಗ ಗರಿಷ್ಠ ಮಟ್ಟಕ್ಕೆ ಏರುತ್ತಿದೆ. ಗುಟ್ಕಾದ ಕಾರಣ ಮತ್ತು ಅಡಕೆ ಕ್ಯಾನ್ಸರ್‌ಕಾರಕ ಅಂಬ ವೈಜ್ಞಾನಿಕ ವರದಿಗಳಿಂದಾಗಿ 'ಮಾನ' ಕಳೆದುಕೊಳ್ಳುವ ಆತಂಕದಲ್ಲಿದ್ದ ಈ ಬೆಳೆಗೆ ಮತ್ತೆ ಬೆಲೆ ಬಂದಿದೆ.

ದೇಶದಲ್ಲಿಯೇ ಆತ್ಯಂತ ಹೆಚ್ಚು ಅಡಕೆ ಬೆಳೆಯುವ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ನಮ್ಮ ರಾಜ್ಯದ ಪ್ರಮುಖ ಅಡಕೆ ಮಾರು ಕಟ್ಟೆಗಳಲ್ಲಿ ಕೆಂಪಡಕೆ ಮತ್ತು ಚಾಲಿಯ ಧಾರಣೆ ಏರುಗತಿಯಲ್ಲಿದೆ. ವಾಸ್ತವವಾಗಿ ಅಡಕೆ ಬೆಳೆಗಾರರು ಮತ್ತು ವರ್ತಕರು ಈ ಬೆಳವಣಿಗೆಯನ್ನು ನಿರೀಕ್ಷಿಸಿರಲೇ ಇಲ್ಲ. ದೇಶದ ಆರ್ಥಿಕತೆ ಕೋವಿಡ್-19ನಿಂದಾಗಿ ಮಂದಗತಿಯಲ್ಲಿರುವುದರಿಂದ ಅಡಕೆಗೆ ಎಂದಿನಂತೆ ಬೇಡಿಕೆ ಇದ್ದರೆ ಸಾಕು ಎಂದುಕೊಳ್ಳುತ್ತಿರುವಾಗಲೇ ಬೆಲೆ ಏರಿಕೆಯ ಬಂಪರ್ ಸುದ್ದಿ ಬಂದಿದೆ. 2014ರಲ್ಲಿ ಕೆಂಪಡಕೆಯ ಬೆಲೆ ಕ್ವಿಂಟಾಲ್‌ಗೆ ಒಂದು ಲಕ್ಷ ರೂ. ಮುಟ್ಟಿತ್ತು. ಆದಕ್ಕೆ ಹೋಲಿಸಿದರೆ 60 ಸಾವಿರ ಕಡಿಮೆಯೇ. ಆದರೆ ಮತ್ತೆಂದೂ ಅಡಕೆಗೆ ಈ ರೀತಿಯ ಬೆಲೆ ಬರಲಾರದು ಎನ್ನುವ ಪರಿಸ್ಥಿತಿ ಕಳೆದ ಆರು ವರ್ಷಗಳಲ್ಲಿ ನಿರ್ಮಾಣವಾಗಿದ್ದರಿಂದ ಈ ಬೆಲೆ ಏರಿಕೆ ಆಶ್ಚರ್ಯಕ್ಕೆ ಕಾರಣವಾಗಿದೆ.

ಏಕ ಫೋಕಸ್

ಏಕೆ ಏರಿಕೆ?

ಸದ್ಯದ ಬೆಲೆ ಏರಿಕೆಗೆ ವರ್ತಕರು ಎರಡು ಕಾರಣ ನೀಡುತ್ತಿದ್ದಾರೆ. ಒಂದು, ಅಡಕೆ ಆಮದು ಸಂಪೂರ್ಣ ನಿಂತಿದ್ದರಿಂದ ದೇಶೀಯ ಅಡಕೆಗೆ ಬೇಡಿಕೆ ಹೆಚ್ಚಿದೆ. ಇನ್ನೊಂದು, ಹೊಸ ಅಡಕೆ ಇನ್ನೂ ಮಾರು ಕಟ್ಟೆಗೆ ಬಾರದೇ ಇರುವುದರಿಂದ ಹಾಗೂ ಈ ವರ್ಷವೂ ಇಳುವರಿ (ಮಳೆ ಹೆಚ್ಚಾಗಿ ಕೊಳೆರೋಗ ಇತ್ಯಾದಿ ಕಾರಣಗಳಿಂದ) ಕಡಿಮೆಯಾಗುವ ನಿರೀಕ್ಷೆ ಇರುವುದರಿಂದ ಅಡಕೆಗೆ ಬೆಲೆ ಏರುತ್ತಿದೆ. ಈ 2 ಕಾರಣಗಳಲ್ಲಿ ಮುಖ್ಯವಾದುದ್ದು ದೇಶೀಯ ಅಡಕೆಗೆ ಬೇಡಿಕೆ ಹೆಚ್ಚುತ್ತಿರುವುದು. ಇದೇ ಸದ್ಯದ ಬೆಲೆ ಏರಿಕೆ ಕಾರಣವಾಗಿದೆ.

ವಿದೇಶದಿಂದ ಅಡಕೆ ಆಮದಾಗುವುದು ಸಂಪೂರ್ಣ ನಿಂತು ಹೋಗಿರುವುದರಿಂದ ಅನಿವಾರ್ಯವಾಗಿ ಅಡಕೆ ಬಳಕೆದಾರರು ದೇಶೀಯ ಅಡಕೆಯನ್ನು ಅವಲಂಬಿಸುವಂತಾಗಿದೆ. ಹೀಗಾಗಿ ಬೇಕು, ದೇಶಿಯ ಅಡಕೆಗೆ ಬೆಲೆ ದೊರೆಯಬೇಕು ಎನ್ನುವುದು ಅಡಕೆ ಬೆಳೆಗಾರರು ಬಹು ವರ್ಷಗಳಿಂದ ಕಾಣುತ್ತಿದ್ದ ಕನಸಾಗಿತ್ತು. 'ವಿದೇಶಿ ಅಡಕೆ ಆಮದಾಗುವುದನ್ನು ತಡೆಯಿರಿ' ಎಂದು ಎರಡು ದಶಕಗಳಿಂದ ಒತ್ತಾಯಿಸುತ್ತಲೇ ಬಂದಿದ್ದರು. ಅಡಕೆ ಬೆಳೆಗಾರರ ಒತ್ತಾಯಕ್ಕೆ ಮಣಿದೇ ಕೇಂದ್ರ ಸರಕಾರ, ಅಡಕೆಯ ಕನಿಷ್ಠ ಆಮದು ಧಾರಣೆಯನ್ನು ಹೆಚ್ಚಿಸುತ್ತ ಬಂದಿತ್ತು. 2015ರಲ್ಲಿ 52 ರೂ.ಗಳಿಂದ 162 ರೂ.ಗಳಿಗೆ, 2017ರ ಜನವರಿಯಲ್ಲಿ 251 ರೂ.ಗಳಿಗೆ ಹೆಚ್ಚಿಸಲಾಗಿತ್ತು. ಆಮದು ಸುಂಕವನ್ನು ಶೇ.100ರಷ್ಟು ವಿಧಿಸಲಾಗುತ್ತಿದೆ.

ಆದರೂ 2006ರಲ್ಲಿ ಜಾರಿಗೆ ಬಂದಿದ್ದ ದಕ್ಷಿಣ ಏಷ್ಯಾ ಮುಕ್ತ ವ್ಯಾಪಾರ ಒಪ್ಪಂದ(ಸಫ್ತಾ)ದ ಅಡಿಯಲ್ಲಿ ಬಾಂಗ್ಲಾದೇಶ, ಭೂತಾನ್, ಮಾಲ್ದೀವ್ಸ್ ನೇಪಾಳ, ಪಾಕಿಸ್ತಾನ ಮತ್ತು ಶ್ರೀಲಂಕಾದಿಂದ ಮುಕ್ತವಾಗಿ ಅಡಕೆ ಆಮದು ಮಾಡಿಕೊಳ್ಳಲು ಅವಕಾಶವಿರುವುದರಿಂದ ಈ ದೇಶಗಳ ಅಡಕೆ ಭಾರತ ಮಾರುಕಟ್ಟೆಗೆ ಹರಿದು ಬರುತ್ತಲೇ ಇತ್ತು. ಕನಿಷ್ಠ ಆಮದು ಧಾರಣೆಯನ್ನು ಹೆಚ್ಚಿಸಿದರೂ ಪ್ರಯೋಜನವಾಗದೇ ಇದ್ದಾಗ 2018ರ ಜುಲೈನಲ್ಲಿ 251 ರೂ.ಗಳಿಗಿಂತ ಕಡಿಮೆ ಬೆಲೆಯ ಅಡಕೆಯನ್ನು ಆಮದು ಮಾಡಿಕೊಳ್ಳುವಂತೆಯೇ ಇಲ್ಲ ಎಂದು ಕೇಂದ್ರ ಆದೇಶ ಕೂಡ ಹೊರಡಿಸಿತ್ತು. ಇದರಿಂದ ಅಧಿಕೃತವಾಗಿ ವಿದೇಶಿ ಅಡಕೆ ಆಮದಿನ ಪ್ರಮಾಣ ಕಡಿಮೆಯಾಗುತ್ತಾ ಬಂದಿದ್ದರೂ ಕಳ್ಳ ಮಾರ್ಗದಿಂದ ಕಳಪೆ ಅಡಕೆ ಆಮದಾಗುವುದು ಸಂಪೂರ್ಣವಾಗಿ ನಿಂತಿರಲಿಲ್ಲ.

ಸಫ್ತಾ ಮತ್ತು ಸಾರ್ಕ್ ವ್ಯಾಪಾರ ಒಪ್ಪಂದಗಳನ್ನು ದುರ್ಬಳಕೆ ಮಾಡಿಕೊಂಡು ಇಂಡೋನೇಷ್ಯಾ, ಮಲೇಷ್ಯಾದ ಅಡಕೆ ಶ್ರೀಲಂಕಾ, ಮ್ಯಾನ್ಮಾರ್, ನೇಪಾಳದ ಮೂಲಕ ಭಾರತಕ್ಕೆ ಬರುತ್ತಲೇ ಇತ್ತು. ಮುಖ್ಯವಾಗಿ ಶ್ರೀಲಂಕಾದ ವ್ಯಾಪಾರಿಗಳು (ಇಂಡೋ-ಶ್ರೀಲಂಕಾ ಫ್ರೀ ಟ್ರೇಡ್ ಅಗ್ರಿಮೆಂಟ್ ದುರ್ಬಳಕೆ ಮಾಡಿಕೊಂಡು) ಇಂಡೋನೇಷ್ಯಾದಿಂದ ಭಾರಿ ಪ್ರಮಾಣದಲ್ಲಿ ಅಡಕೆ ತರಿಸಿಕೊಂಡು, ಭಾರತಕ್ಕೆ ಮರು ರಫ್ತು ಮಾಡುವುದರ ಮೂಲಕ ಮುಕ್ತ ವ್ಯಾಪಾರದ ನಿಯಮಗಳನ್ನು ಉಲ್ಲಂಘಿಸುತ್ತಿದ್ದರು. ಇದಕ್ಕೆ ಭಾರತದ ಕಸ್ಟಮ್ ಅಧಿಕಾರಿಗಳ ಸಹಕಾರವೂ ಇತ್ತು!



ಉತ್ಪಾದನೆ 5 ವರ್ಷದಲ್ಲಿ ಶೇ.55 ಹೆಚ್ಚು!

ನಮ್ಮ ದೇಶದಲ್ಲಿ ಕಳೆದ ಐದು ವರ್ಷದಲ್ಲಿ ಅಡಕೆ ಉತ್ಪಾದನೆ ಶೇ. 55ರಷ್ಟು ಹೆಚ್ಚಿದೆ. 2015-16ರಲ್ಲಿ 7.13 ಲಕ್ಷ ಟನ್ ಅಡಕೆ ಉತ್ಪಾದನೆಯಾಗಿದ್ದರೆ 2019-20ರಲ್ಲಿ ಇದು 11.07 ಲಕ್ಷ ಟನ್‌ಗೆ ಏರಿಕೆಯಾಗಿತ್ತು. ಇದರಲ್ಲಿ ರಾಜ್ಯದ ಪಾಲು ಶೇ. 75ರಷ್ಟು. ಕೇಂದ್ರ ಕೃಷಿ ಇಲಾಖೆಯ ಮಾಹಿತಿ ಪ್ರಕಾರವೇ ರಾಜ್ಯದಲ್ಲಿ ಕಳೆದ ಐದು ವರ್ಷಗಳಲ್ಲಿ ಅಡಕೆ ಉತ್ಪಾದನೆ ಶೇ. 95ರಷ್ಟು ಹೆಚ್ಚಾಗಿದೆ. 2015-16ರಲ್ಲಿ ರಾಜ್ಯದಲ್ಲಿ 4.36 ಲಕ್ಷ ಟನ್ ಅಡಕೆ ಬೆಳೆದಿದ್ದರೆ, 2019-20ನೇ ಸಾಲಿನಲ್ಲಿ 8.5 ಲಕ್ಷ ಟನ್ ಅಡಕೆ ಬೆಳೆಯಲಾಗಿದೆ. ನಮ್ಮ ದೇಶದಲ್ಲಿ ಬೆಳೆಯಲಾಗುತ್ತಿರುವ ಅಡಕೆಯ ಹೆಚ್ಚಿನ ಪ್ರಮಾಣ ದೇಶದಲ್ಲಿಯೇ ಬಳಕೆಯಾಗುತ್ತಿದ್ದು, ಶೇ.5ರಷ್ಟು ಮಾತ್ರ ರಫ್ತು ಮಾಡಲಾಗುತ್ತಿದೆ. ನಮ್ಮ ರಾಜ್ಯದಲ್ಲಿ ಅಡಕೆ ಉತ್ಪಾದನೆ ಹೆಚ್ಚಾಗುತ್ತಿದ್ದರೆ ನೆರೆಯ ಕೇರಳದಲ್ಲಿ ಕಡಿಮೆಯಾಗುತ್ತಿದೆ!

ಈಗೇನಾಯಿತು?

2016ರಲ್ಲಿ ಮಹಾರಾಷ್ಟ್ರದ ನಾಗ್‌ಪುರದಲ್ಲಿ ರೈಲ್ವೇ ಪೊಲೀಸರು 23 ವ್ಯಾಗನ್ ಅಕ್ರಮ ಕಳಪೆ ಗುಣಮಟ್ಟದ ಆಮದು ಅಡಕೆಯನ್ನು ವಶಪಡಿಸಿಕೊಂಡಿದ್ದರು. ಆದರೆ ಇದರ ತನಿಖೆ ಸರಿಯಾಗಿ ನಡೆಯದೇ ಇದ್ದಾಗ ಡಾ.ಮಹಬೂಬ್ ಎಂಕೆ ಚಿಂತನ್‌ವಾಲಾ ಎಂಬವರು ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ಸಲ್ಲಿಸಿದ್ದರು. ಅತ್ಯಂತ ಕಳಪೆ ದರ್ಜೆಯ ಅಡಕೆ ವಿದೇಶದಿಂದ ಕಳ್ಳ ಮಾರ್ಗದಲ್ಲಿ ಆಮದಾಗುತ್ತಿದ್ದು, ಅನಾಮಧೇಯರು ಈ ಅಕ್ರಮ ಚಟುವಟಿಕೆಯಲ್ಲಿ ಭಾಗಿಯಾಗಿದ್ದಾರೆ. ಇದರಿಂದ ಪ್ರತಿ ವರ್ಷ ಸರಕಾರಕ್ಕೆ 15 ಸಾವಿರ ಕೋಟಿ ರೂ. ಆಮದು ಸುಂಕ ನಷ್ಟವಾಗುತ್ತಿದೆ ಎಂದು ಅವರು ಅರ್ಜಿಯಲ್ಲಿ ಹೇಳಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಬಾಂಬೆ ಹೈಕೋರ್ಟ್‌ನ ನಾಗಪುರ್ ಪೀಠ, ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಿತ್ತು.

ಕಳೆದ ಮಾರ್ಚ್‌ನಲ್ಲಿ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಆರಂಭಿಸಿದ ಸಿಬಿಐ, ಕೇಂದ್ರ ಆಬಕಾರಿ ಮತ್ತು ಸುಂಕ ಇಲಾಖೆಯ ಅಧಿಕಾರಿಗಳು ಈ ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂದು ಕೋರ್ಟ್‌ಗೆ ತಿಳಿಸಿತ್ತು. ಆದರೆ ಅಧಿಕಾರಿಗಳ ಹೆಸರನ್ನು ತಿಳಿಸಿರಲಿಲ್ಲ. ಅಧಿಕಾರಿಗಳ ಮಾಹಿತಿಯನ್ನೂ ನೀಡಬೇಕು, ಕಟ್ಟುನಿಟ್ಟಿನ ತನಿಖೆ ನಡೆಸಬೇಕು ಎಂದು ಕೋರ್ಟ್ ಸಿಬಿಐಗೆ ಸೂಚಿಸಿತ್ತು. ಇದರ ಪರಿಣಾಮ ಜೂನ್ 29ರಂದು ಸಿಬಿಐ ಮುಂಬಯಿ, ನಾಗ್‌ಪುರ್ ಮತ್ತು ಅಹ್ಮದಾಬಾದ್‌ನ 19 ಕಡೆ ದಾಳಿ ನಡೆಸಿ, ಅಕ್ರಮ ಅಡಕೆ ಆಮದಿಗೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಿಸಿತ್ತು. ಅಲ್ಲದೆ ಈ ಹಗರಣದಲ್ಲಿ ಭಾಗಿಯಾಗುತ್ತಿದ್ದ ಅಧಿಕಾರಿಗಳಿಗೂ ಬಿಸಿ ಮುಟ್ಟಿಸಿತ್ತು. ಪರಿಣಾಮ ಅಡ್ಡ ಹಾದಿಯಲ್ಲಿ ಅಡಕೆ ತರಿಸಿಕೊಳ್ಳುತ್ತಿದ್ದ ವ್ಯಾಪಾರಿಗಳೆಲ್ಲಾ ಹೆದರಿದರು. ತನಿಖೆ ವೇಗ ಪಡೆಯುತ್ತಿದ್ದಂತೆ ಅಕ್ರಮವಾಗಿ ವ್ಯಾಪಾರ ಮಾಡುತ್ತಿದ್ದವರೆಲ್ಲಾ ಬಲ ಸೇರಿದರು. ಹೆಚ್ಚು ಕಡಿಮೆ ಸಂಪೂರ್ಣವಾಗಿ ಆಮದು ಸ್ಥಗಿತಗೊಂಡಿತು. ದೇಶಿಯ ಅಡಕೆಗೆ ಸಹಜವಾಗಿಯೇ ಬೇಡಿಕೆ ಹೆಚ್ಚಾಗತೊಡಗಿತು.

ಮೂರನೇ ದರ್ಜೆಗೆ ಬೇಡಿಕೆ

ವಿದೇಶದಿಂದ ಆಮದಾಗುತ್ತಿದ್ದುದ್ದು ಸಂಪೂರ್ಣ ಕಳಪೆ ಅಡಕೆಯೇ. ಕಡಿಮೆ ಬೆಲೆಗೆ ಸಿಗುತ್ತಿದ್ದ ಅಡಕೆಯನ್ನು ತರಿಸಿಕೊಂಡು, ಇಲ್ಲಿಯ ಅಡಕೆಗೆ ಬೆಲೆ ಇಲ್ಲದಂತೆ ಮಾಡಲಾಗುತ್ತಿತ್ತು. ಕೆಲ ವ್ಯಾಪಾರಿಗಳು ಈ ಕಳಪೆ ಅಡಕೆಯನ್ನು ನಮ್ಮ ಒಳ್ಳೆಯ ಅಡಕೆಯೊಂದಿಗೆ ಬೆರೆಸಿ ಮಾರಾಟ ಮಾಡುತ್ತಿದ್ದರು. ಗುಟ್ಕಾ ಮತ್ತಿತರ ಕಂಪನಿಗಳಿಗೆ ಈ ಅಡಕೆಯನ್ನೇ ಸರಬರಾಜು ಮಾಡಲಾಗುತ್ತಿತ್ತು. ತನಿಖೆಯ ಭಯದಿಂದ ಈಗ ಆಮದು ನಿಂತಿರುವುದರಿಂದ ದೇಶದಲ್ಲಿನ ತೃತೀಯ ದರ್ಜೆಯ ಅಡಕೆಗೆ ಮೊದಲು ಬೇಡಿಕೆ ಹೆಚ್ಚಿತು. ಸದ್ಯ ಶಿವಮೊಗ್ಗ ಅಡಕೆ ಮಾರು ಕಟ್ಟೆಯಲ್ಲಿ ಗೊರಬಲಿನ ಬೆಲೆ 26 ಸಾವಿರದಿಂದ 42 ಸಾವಿರಕ್ಕೆ ಜಂಪ್ ಆಗಿದೆ. ಇದರ ಪರಿಣಾಮ ಬೇರೆ ಪ್ರಕಾರಗಳ ಅಡಕೆಯ ಬೆಲೆಯೂ ಹೆಚ್ಚಿದೆ. ಶ್ರೀಲಂಕಾದ ಅಡಕೆ ಮರು ರಫ್ತಿನ ವ್ಯಾಪಾರಕ್ಕೆ ಭಾರತ ಅವಕಾಶ ನೀಡದೇ ಇದ್ದಲ್ಲಿ ಅಡಕೆಯ ಈ ಧಾರಣೆಯೇ ಸ್ಥಿರವಾಗಲಿದೆ ಎನ್ನುತ್ತಾರೆ ಶಿವಮೊಗ್ಗದ ಅಡಕೆ ಬೆಳೆಗಾರರ ಸಂಘದ ಅಧ್ಯಕ್ಷ ರಮೇಶ್ ಹೆಗ್ಡೆ.

ಕದ್ದಡಿಕೆಗೆ ಕಳ್ಳಮಾರ್ಗ

ಶ್ರೀಲಂಕಾ 2018ರಲ್ಲಿ 4647.3 ಮೆಟ್ರಿಕ್ ಟನ್ ಅಡಕೆಯನ್ನು ಭಾರತಕ್ಕೆ ರಫ್ತು ಮಾಡಿತ್ತು. 2019ರ ಜನವರಿಯಿಂದ ಜೂನ್ ವರೆಗಿನ ಅವಧಿಯಲ್ಲಿ 6134 ಮೆ.ಟನ್ ರಫ್ತು ಮಾಡಿತ್ತು. 2020ರ ಇದೇ ಅವಧಿಯಲ್ಲಿ 7996.10 ಮೆ.ಟನ್ ರಫ್ತು ಮಾಡಿತ್ತು. ಹೀಗೆ ರಫ್ತಿನ ಪ್ರಮಾಣ ಏರುತ್ತಲೇ ಇತ್ತು. ಆ ದೇಶದಲ್ಲಿ ಬೆಳೆಯಲಾಗುತ್ತಿದ್ದ ಅಡಕೆಯ ಪ್ರಮಾಣಕ್ಕಿಂತ ಸಾವಿರಾರು ಪಟ್ಟು ಹೆಚ್ಚು ಅಡಕೆಯನ್ನು ಅದು ರಫ್ತು ಮಾಡುತ್ತಿದೆ! ಈ ಬಗ್ಗೆ ವಿತ್ತ ಸಚಿವಾಲಯ ಎಚ್ಚರಿಕೆ ನೀಡಿದರೂ ಲಂಕಾ ಸರಕಾರ ತಲೆಕೆಡಿಸಿಕೊಂಡಿಲ್ಲ. ಶ್ರೀಲಂಕಾದಿಂದ ಬಟ್ಟೆಭಾರತ-ಮ್ಯಾನ್ಮಾರ್ ಗಡಿಯ ಮೂಲಕ ಹೆಚ್ಚು ಅಡಕೆ ಕಳ್ಳಮಾರ್ಗದಲ್ಲಿ ಭಾರತಕ್ಕೆ ಬರುತ್ತಿದೆ. ಆಗಾಗ ಇವುಗಳನ್ನು ಪತ್ತೆ ಹಚ್ಚಿ, ವಶಪಡಿಸಿಕೊಳ್ಳಲಾಗುತ್ತದೆಯಾದರೂ, ಇದರ ಪ್ರಮಾಣ ಅಲ್ಪ ಅಲ್ಪವೆ ಇದೇ ರೀತಿಯಾಗಿ ಬಾಂಗ್ಲಾದೇಶ ಮತ್ತು ನೇಪಾಳದಿಂದಲೂ ಅಡಕೆ ಆಮದಾಗುತ್ತಿದೆ.